# ಶರಣಾಗತಿಯ ಆರು ಲಕ್ಷಣಗಳು

ಸ್ವಾಮಿ ರಾಘವೇಶಾನಂದ

**ಭಕ್ತಿಯ ಅತ್ಯಂತ ಮುಖ್ಯ ಲಕ್ಷಣ ಶರಣಾಗತಿ. ಈ ಶರಣಾಗತಿಗೆ ಮುಖ್ಯ ಉದಾಹರಣೆ ವಿಭೀಷಣ. ಅವನ ಜೀವನದಲ್ಲಿ ಕಂಡುಬರುವ ಶರಣಾಗತಿಯ ಪ್ರಧಾನ ಲಕ್ಷಣಗಳನ್ನು ವಿವರಿಸಿರುವ ಸ್ವಾಮಿ ರಾಘವೇಶಾನಂದರು ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು.**

ರಾಮಾಯಣದಲ್ಲಿ ಹೇಳಿರುವಂತೆ, ಸೀತೆಯನ್ನು ಹುಡುಕಲೆಂದು ಹೊರಟ ವಾನರರಲ್ಲಿ ಆಂಜನೇಯನು ಸಮುದ್ರವನ್ನು ದಾಟಿ ಲಂಕೆಯನ್ನು ತಲುಪಿ ಅಲ್ಲಿ ಎಲ್ಲಾ ಕಡೆ ಸೀತೆಗಾಗಿ ಹುಡುಕುತ್ತಾನೆ. ಅವನ ಕಾತರ ಸೀತೆಯನ್ನು ಕಂಡುಹಿಡಿಯುವುದಕ್ಕಿಂತ ಹೆಚ್ಚಾಗಿ, ಅವಳ ದರ್ಶನ ಭಾಗ್ಯವನ್ನು ಪಡೆದು ತಾನು ಧನ್ಯನಾಗಬೇಕು ಎಂದು. ಲಂಕೆಯಲ್ಲಿ ಅವನಿಗೆ ಮಾನಿನಿ, ಕಾಮಿನಿ, ಭೋಗಿನಿ, ವಿಯೋಗಿನಿಯರ ದರ್ಶನವಾಯಿತೇ ವಿನಾ ಶ್ರೀಮನ್ನಾರಾಯಣನ ನಿತ್ಯಯೋಗಿನಿಯಾದ ಸೀತಾಮಾತೆಯ ದರ್ಶನವಾಗಲಿಲ್ಲ. ಹಾಗೇ ಸುತ್ತಾಡುತ್ತಾ, ಸುತ್ತಾಡುತ್ತಾ ಆಯಾಸಗೊಂಡಾಗ ಎಲ್ಲಿಂದಲೋ ಗಾಳಿಯಲ್ಲಿ ತೇಲಿ ಬರುವ ಶ್ರೀರಾಮನಾಮದ ಮಧುರಗಾನ ಕೇಳಿ ಬರುತ್ತದೆ. ಆಂಜನೇಯನ ಆಶ್ಚರ್ಯ, ಆನಂದಕ್ಕೆ ಪಾರವೇ ಇಲ್ಲ. ಭಿಕ್ಷುಕನಿಗೆ ಮೃಷ್ಟಾನ್ನ ದೊರೆತಂತೆ, ಬಾಯಾರಿದವನಿಗೆ ಭಾಗೀರಥಿ ದೊರೆತಂತೆ ಆಗುತ್ತದೆ ಅವನಿಗೆ. ಪರಮ ಪವಿತ್ರವಾದ ಶ್ರೀರಾಮನ ನಾಮಸ್ಮರಣೆ ಮಾಡುತ್ತಿರುವ ಧನ್ಯರಾರೋ ಎಂದು ಆ ಧ್ವನಿ ಬರುವ ದಿಕ್ಕನ್ನು ಹುಡುಕಿಕೊಂಡು ಹೊರಡುತ್ತಾನೆ. ಅಲ್ಲೊಂದು ದಿವ್ಯವಾದ ಅರಮನೆ ಕಣ್ಣಿಗೆ ಬೀಳುತ್ತದೆ. ಅದು ಹೇಗಿತ್ತೆಂಬುದನ್ನು ತುಲಸೀದಾಸರು ತಮ್ಮ ಪವಿತ್ರಗ್ರಂಥವಾದ ಶ್ರೀರಾಮಚರಿತಮಾನಸದಲ್ಲಿ ವಿವರಿಸುತ್ತಾರೆ :

"ಆ ಅರಮನೆಯು ಶ್ರೀರಾಮನ ಆಯುಧವಾದ ಧನುರ್ಬಾಣಗಳ ಚಿಹ್ನೆಯಿಂದ ಅಂಕಿತವಾಗಿತ್ತು. ಅವರ್ಣನೀಯವಾದ ಆ ಭವನದ ಸುತ್ತಲೂ ಶ್ರೀತುಲಸೀ ಗಿಡಗಳು. ಅಲ್ಲಿ ಗೋಡೆಯ ಮೇಲೆ ಶ್ರೀಹರಿಯ ಅನೇಕಾನೇಕ ಅವತಾರ ಲೀಲೆಗಳ ಚಿತ್ರಗಳೂ ಅನೇಕಾನೇಕ ಪವಿತ್ರ ಪೂಜಾವಸ್ತುಗಳ ಚಿತ್ರಗಳೂ ಇದ್ದವು." ಇಂತಹ ರಾತ್ರಿಯಲ್ಲಿ ಹರಿ ಭಜನೆ ಮಾಡುತ್ತ ಕಾಲಕಳೆಯುತ್ತಲಿರುವವರು ಯಾರು ಎಂಬುದನ್ನು ತಿಳಿಯುವ ತೀವ್ರವಾದ ಕುತೂಹಲ ಆಂಜನೇಯನಿಗುಂಟಾಯಿತು.

ಆಂಜನೇಯ ಸೂಕ್ಷ್ಮರೂಪದಿಂದ ಮೆಲ್ಲನೆ ಒಳಹೋಗಲು ದ್ವಾರದ ಎರಡೂ ಪಕ್ಕಗಳಲ್ಲಿ, ಪಂಜರದಲ್ಲಿ ತೂಗುತ್ತಿರುವ ಗಿಳಿಗಳು, ರಾಮ, ರಾಮ ಎಂದು ಹಾಡುತ್ತಿರುವುದು ಕೇಳಿಸಿತು. ಆ ಗಿಳಿಗಳು, ಆಂಜನೇಯನು ಸೀತೆಯನ್ನು ಹುಡುಕಿಕೊಂಡು ಅಲ್ಲಿಗೆ ಬಂದಿರುವನು ಎಂದೆಣಿಸಿ : "ಹೇ ಹನುಮ! ಪರಸ್ತ್ರೀಯರನ್ನು ತಾಯಿಯಂತೆ ಕಾಣುವವನ ಅರಮನೆಯಿದು, ನೀನು ಸೀತೆಯನ್ನು ಅರಸುವ ಠಾವು ಇದಲ್ಲ" ಎಂದವು. ಶ್ರೀರಾಮನಾಮ ಸ್ಮರಣೆ, ಕೀರ್ತನೆ, ಇವನ್ನು ಕೇಳಿ, ಇವನ್ಯಾರೋ ಮಹಾತ್ಮನಿರಬೇಕು ಎಂದು ಯೋಚಿಸಿ, ಸಾಧು ಬ್ರಾಹ್ಮಣನ ವೇಷದಿಂದ ಆಂಜನೇಯ ಒಳಗೆ ಹೋಗುತ್ತಾನೆ. ಅಲ್ಲಿ ಭಕ್ತಿಪರವಶನಾಗಿ ಹರಿನಾಮೋಚ್ಚಾರಣೆ ಮಾಡುತ್ತಾ, ಆನಂದದಿಂದ ಅತ್ತಂದಿತ್ತ ನಡೆದಾಡುತ್ತಿದ್ದ ವ್ಯಕ್ತಿಯನ್ನು ಕಂಡು ಇದೇನು ದುರ್ಜನರ ಮಧ್ಯೆ ಇಂತಹ ಸಜ್ಜನ, ವಿಷದೊಳಗೆ ಅಮೃತವೇ, ಕಾಡುವೃಕ್ಷಗಳ ಮಧ್ಯೆ ಸುಗಂಧ ಬೀಸುವ ಚಂದನವೃಕ್ಷವೇ ಎಂದು ಆಶ್ಚರ್ಯ ಪಡುತ್ತಾನೆ. ಆ ವ್ಯಕ್ತಿ ಬೇರಾರೂ ಆಗಿರದೆ ರಾವಣನ ಸ್ವಂತ ಸೋದರನಾದ ವಿಭೀಷಣನೇ ಆಗಿರುತ್ತಾನೆ.

ಸಾಧುವೇಷದಲ್ಲಿದ್ದ ಆಂಜನೇಯನನ್ನು ನೋಡಿ, ಯಾರೋ ಸಂತರು ನಮ್ಮ ಮನೆಗೆ ಬಂದು ನನ್ನನ್ನು ಧನ್ಯರನ್ನಾಗಿ ಮಾಡುತ್ತಿದ್ದಾರೆಂದು ನೆನೆದು, ಅವರನ್ನು ಹಲವು ರೀತಿಯಿಂದ ವಿಭೀಷಣನು ಉಪಚರಿಸುತ್ತಾನೆ. ಆಂಜನೇಯನು ತನ್ನ ಪರಿಚಯವನ್ನೂ ತಾನು ಬಂದ ಕಾರ್ಯವನ್ನೂ ಗುಟ್ಟಾಗಿ ತಿಳಿಸಿದಾಗ, ಇಬ್ಬರೂ ಎಲ್ಲವನ್ನೂ ಮರೆತು ಶ್ರೀರಾಮನ ದಿವ್ಯನಾಮ, ರೂಪ, ಗುಣಗಳನ್ನು ಚಿಂತಿಸುತ್ತಾ, ಕೀರ್ತಿಸುತ್ತಾ, ಭಕ್ತಿಪರವಶರಾಗಿ ತಮ್ಮನ್ನೇ ತಾವು ಮರೆಯುತ್ತಾರೆ. ಸ್ವಲ್ಪ ಹೊತ್ತಾದ ನಂತರ ವಿಭೀಷಣ ತನ್ನ ಪರಿಸ್ಥಿತಿಯನ್ನು ಆಂಜನೇಯನಿಗೆ ವಿವರಿಸುತ್ತಾನೆ. ಅದನ್ನು ಶ್ರೀ ತುಲಸೀದಾಸರು ಸುಂದರವಾಗಿ ವರ್ಣಿಸುತ್ತಾರೆ: "ವಿಭೀಷಣ ಹೇಳುತ್ತಾನೆ : 'ಓ ಆಂಜನೇಯ!

"ಮೊದಲು ನಾಲಗೆ, ನಂತರ ಕಠಿಣ ಹಲ್ಲುಗಳು ಬರುತ್ತವೆ. ಆದರೆ ತಮ್ಮ ಕಠೋರ ಸ್ವಭಾವದ ಕಾರಣದಿಂದ ಹಲ್ಲುಗಳು ಮೊದಲು ಕಳಚಿ ಬೀಳುತ್ತವೆ. ಆದರೆ ಹಲ್ಲುಗಳು ಬರುವುದಕ್ಕಿಂತ ಮುಂಚಿತವಾಗಿ ಇದ್ದ ನಾಲಗೆಯು ಮಾತ್ರ ತನ್ನ ಮೃದು ಸ್ವಭಾವದಿಂದ ಕೊನೆಯುವರಗೂ ಉಳಿದುಕೊಳ್ಳುತ್ತದೆ."

ನಾನು ಹೇಗಿದ್ದೇನೆ ಎಂದು ಕೇಳುತ್ತೀಯಾ? ಹಲ್ಲುಗಳ ಮಧ್ಯದಲ್ಲಿರುವ ನಾಲಿಗೆಯಂತೆ ನಾನು ಈ ರಾಕ್ಷಸರ ಮಧ್ಯದಲ್ಲಿ ಹೇಗೋ ಕಾಲಕಳೆಯುತ್ತಿದ್ದೇನೆ. ಶ್ರೀರಾಮನು ಎಂದು ಕೊಂಡೊಯ್ಯುವನೋ, ಎಂದು ಕೃಪೆ ಮಾಡುವನೋ ಎಂದು ಕಾದಿದ್ದೇನೆ. ಇಂದು ನಿನ್ನಂತಹ ಸಂತನ ದರ್ಶನವಾಗಿರುವುದರಿಂದ ಅವನ ಕೃಪೆ ಬರುವುದೆಂಬ ಭರವಸೆ ನನಗೆ ಬಂದಿದೆ.' "


ವಿಭೀಷಣನನ್ನು ಆಲಂಗಿಸಿ ಆಂಜನೇಯನು ಹೇಳಿದನು : "ಹೇ ಮಿತ್ರಾ, ನೀನು ಭಾಗ್ಯವಂತ. ನೀನು ಹೇಳಿದೆ, ಹಲ್ಲುಗಳ ಮಧ್ಯೆ ಇರುವ ನಾಲಿಗೆಯಂತೆ ಇದ್ದೀಯೆ ಎಂದು, ಅದೇನು ಸಾಮಾನ್ಯ ವಿಷಯವೇ? ಹಲ್ಲು ನಾಲಿಗೆ ಇರುವುದು ಎಲ್ಲಿ ಹೇಳು?" ಎಂದು

ಪ್ರಶ್ನೆ ಹಾಕಿದ. ವಿಭೀಷಣನು ಅದಕ್ಕೆ "ಬಾಯಿಯಲ್ಲಿ" ಎಂದ. "ಹಾಗಾದರೆ ಇವುಗಳಲ್ಲಿ ಬಿದ್ದು ಹೋಗುವುದು ಯಾವುದು?" ಮತ್ತೆ ಪ್ರಶ್ನಿಸಿದ. "ನಾಲಿಗೆಯಲ್ಲ, ಹಲ್ಲುಗಳು." "ಇದಕ್ಕೆ ಕಾರಣವೇನು?" "ಹಲ್ಲುಗಳು ಬಹು ಕಠಿಣ. ಅದಕ್ಕೇ ಅವುಗಳು ಉದುರಿಹೋಗುತ್ತವೆ. ನಾಲಿಗೆ ಬಹಳ ಮೃದು ಅದಕ್ಕೇ ಅದು ಉದುರುವುದಿಲ್ಲ." "ವಿಭೀಷಣ! ಕಠಿಣವಾದುವುಗಳು ಅಶಾಶ್ವತ. ಮೃದುವಾಗಿರುವುದು ಶಾಶ್ವತ. ಹಲ್ಲುಗಳು ಹುಟ್ಟಿದುವುಗಳು. ನಾಲಿಗೆ ಎಂದೂ ಹುಟ್ಟಿಲ್ಲ. ಅದು ಅಜನ್ಮ. ಹಲ್ಲುಗಳು ಎಲ್ಲವನ್ನು ತುಂಡು ತುಂಡು ಮಾಡುತ್ತವೆ. ಆದರೆ ನಾಲಿಗೆ ಎಲ್ಲವನ್ನೂ ಒಂದುಗೂಡಿಸುತ್ತದೆ," ಎಂದು ಮುಂತಾಗಿ ಹೇಳಿದ ಹನುಮನು ವಿಚಾರದ ಗತಿಯನ್ನು ಬದಲಾಯಿಸಿ "ನೀನು ಸಹಾಯ ಮಾಡಿದರೆ ಈ ರಾಕ್ಷಸರನ್ನು ನಾಶ ಮಾಡುವುದು ನಮಗೆ ಸುಲಭ" ಎಂದು ಹೇಳಿದ. ಇದು ಇವರಿಬ್ಬರ ಮಿಲನದ ತುಲಸೀದಾಸರ ವರ್ಣನೆ.

ಇನ್ನೊಂದು ಮುಖ್ಯವಾದ ಸಂದೇಶವನ್ನು ಹನುಮಂತನು ವಿಭೀಷಣನಿಗೆ ಬೋಧಿಸುತ್ತಾನೆ. "ನೋಡು, ವಿಭೀಷಣ, ನೀನು ರಾಮನನ್ನು ಹಾಡಿದ್ದೀಯೆ. ಹೊಗಳಿದ್ದೀಯೆ. ಆದರೆ ರಾಮ ಕಾರ್ಯವನ್ನು ನೀನು ಏನೂ ಮಾಡಿಲ್ಲ. ಭಕ್ತಿಯಿಂದ ನಿನಗೆ ರಾಮನ ಕೃಪೆ ದೊರಕಬಹುದೇ ಹೊರತು, ರಾಮನ ಪ್ರೀತಿ ದೊರಕುವುದಿಲ್ಲ. ಪ್ರೀತಿ ಬೇರೆ, ಕೃಪೆ ಬೇರೆ. ಇದರಲ್ಲಿ ಅಂತರವಿದೆ. ಶ್ರೀರಾಮನ ಕಾರ್ಯದಲ್ಲಿ ಭಾಗಿಯಾದಲ್ಲಿ, ಅವನ ಪ್ರೀತಿಗೆ ಪಾತ್ರನಾಗಿ ಅವನ ಪ್ರೇಮವನ್ನು ಸವಿಯುತ್ತಾ, ಸವಿಯುತ್ತಾ ಜೀವನ ಕಳೆಯುತ್ತದೆ. ಆದುದರಿಂದ ಅವನ ಕಾರ್ಯದಲ್ಲಿ ಭಾಗಿಯಾಗು." ಹೀಗೆ ರಾತ್ರಿಯೆಲ್ಲಾ ಮಾತುಕತೆಯಾಡಿ, ಸೀತಾದೇವಿ ಇರುವ ಸ್ಥಳವನ್ನು ವಿಭೀಷಣನಿಂದ ತಿಳಿದುಕೊಂಡು, ಆಂಜನೇಯನು ಅಲ್ಲಿಗೆ ಹೊರಡುತ್ತಾನೆ.

ಮುಂದೆ ವಿಭೀಷಣ ರಾವಣನ ಸಭೆಯಲ್ಲಿ ಅವನಿಗೆ ಹಲವಾರು ಬುದ್ಧಿವಾದಗಳನ್ನು ಹೇಳಿ ಅವನ ಕೋಪಕ್ಕೊಳಗಾಗುತ್ತಾನೆ. ರಾವಣ ವಿಭೀಷಣನನ್ನು ಒದ್ದು ಹೊರಹಾಕುತ್ತಾನೆ. ವಿಭೀಷಣನು ಅಲ್ಲಿಂದ ತನ್ನ ತಾಯಿಯಾದ ಕೈಕಸಿಯ ಬಳಿಗೆ ಬಂದು ಅವಳ ಪಾದಗಳಿಗೆ ಎರಗಿದಾಗ ಆ ವೃದ್ಧಮಾತೆ, "ಕಂದ! ಹೋಗು, ಶ್ರೀರಾಮನ ದಯೆಯಿಂದ ಅವನ ಕೃಪೆಗೆ ಪಾತ್ರನಾಗಿ ದೀರ್ಘಾಯುಸ್ಸನ್ನು ಹೊಂದಿ ಲಂಕೆಯನ್ನು ದೀರ್ಘಕಾಲ ಆಳು. ಸತ್ಪುತ್ರನಾದ ನೀನು ನನಗೆ ಮರಣೋತ್ತರ ಕಾರ್ಯಗಳನ್ನು ಮಾಡು," ಎಂದು ಅಪ್ಪಿ ಆಶೀರ್ವದಿಸುತ್ತಾಳೆ.

ವಿಭೀಷಣ ತನ್ನ ನಾಲ್ವರು ಮಂತ್ರಿಗಳ ಸಮೇತ ಆಕಾಶಕ್ಕೆ ಹಾರಿ ರಾಮನಿರುವೆಡೆಗೆ ಬಂದು ಅಲ್ಲೇ ಆಕಾಶದಲ್ಲೆ ನಿಲ್ಲುತ್ತಾನೆ. ಶ್ರೀರಾಮನ ಕೃಪೆಗೆ ಹಾತೊರೆಯುತ್ತಿದ್ದ ವಿಭೀಷಣನ ಮನಸ್ಸಿನಲ್ಲಿ ಒಂದು ಸಂದೇಹ ಕಾಡುತ್ತದೆ. ಅದೇನೆಂದರೆ, "ಶ್ರೀರಾಮ ಭ್ರಾತೃಪ್ರೇಮಿ. ನಾನಾದರೋ ಭ್ರಾತೃದ್ರೋಹಿ. ಇಂತಹ ನನ್ನನ್ನು ಅವನು ಸ್ವೀಕರಿಸುವನೆ?" ಆದರೆ ಶ್ರೀರಾಮರ ಪಕ್ಕದಲ್ಲಿದ್ದ ಲಕ್ಷ್ಮಣ ಸುಗ್ರೀವರನ್ನು ನೋಡಿ ಧೈರ್ಯಗೊಂಡ. ಲಕ್ಷ್ಮಣ ಭರತನ ಮೇಲೆ ಕೈಯೆತ್ತಲು ಸಿದ್ಧನಾಗಿದ್ದವನು. ಸುಗ್ರೀವನಾದರೊ ವಾಲಿಯ ಹತ್ಯೆಗೆ ಕಾರಣನಾಗಿದ್ದ. ಇವರಿಗೇ ಅಭಯ ಕೊಟ್ಟಿರುವಾಗ ನನಗೂ ಶ್ರೀರಾಮನ ಪಾದದಲ್ಲಿ ಸ್ಥಳ ಸಿಗುತ್ತದೆ ಎಂಬ ನಂಬಿಕೆ ಬರುತ್ತದೆ. ಅವನನ್ನು ಆಕಾಶದಲ್ಲಿ ನೋಡಿದ ಕಪಿಗಳೆಲ್ಲರಿಗೂ ಸಂದೇಹ ಹಾಗೂ ಕೋಪ ಬರುತ್ತದೆ. ಅವನಾಡಿದ ರಾಮಪರವಾದ ಮಾತುಗಳನ್ನು ಕೇಳಿದಮೇಲಂತೂ ಇವನು ರಾವಣನ ಗೂಢಚಾರನೇ ಇರಬೇಕು ಎಂದು ಸಂದೇಹ ಪಡುತ್ತಾರೆ. ವಿಭೀಷಣನು ಆಕಾಶದಲ್ಲಿ ಶ್ರೀರಾಮನ ಆಣತಿಗಾಗಿ ಕಾದು ನಿಂತಿದ್ದಾಗ ಶ್ರೀರಾಮನು ಅವನನ್ನು ಸ್ವೀಕರಿಸುವ ಬಗ್ಗೆ ಸುಗ್ರೀವ ಮೊದಲಾದವರ ಅಭಿಪ್ರಾಯ ಕೇಳುತ್ತಿದ್ದ. ಒಬ್ಬೊಬ್ಬರೂ ಒಂದೊಂದನ್ನು ಹೇಳುತ್ತಿದ್ದರು. ಕೊನೆಗೆ ದೈವಮೂರ್ತಿಯಾದ ಶ್ರೀರಾಮನು ತನ್ನ ಘನತೆಗೆ ತಕ್ಕಂತೆ ತನ್ನ ನಿರ್ಧಾರವನ್ನು ಹೇಳುತ್ತಾನೆ. ಅದನ್ನು ವಾಲ್ಮೀಕಿಗಳು ಹೀಗೆ ವಿವರಿಸಿದ್ದಾರೆ: "ಹೇ ವಾನರಶ್ರೇಷ್ಠನಾದ ಸುಗ್ರೀವನೇ! ಯಾರೇ ಆದರೂ ಒಮ್ಮೆ ನನಗೆ ಶರಣಾಗಿ 'ನಾನು ನಿನ್ನವನು' ಎಂದು ಯಾಚಿಸಿದರೆ ಅವನಿಗೆ ನಾನು ಅಭಯವಿತ್ತು ರಕ್ಷಿಸುತ್ತೇನೆ. ಅವನಿಗೆ ಯಾರಿಂದಲೇ ಆಗಲಿ ಕಷ್ಟಗಳು ಬರದಂತೆ ಅವನ ಯೋಗಕ್ಷೇಮವನ್ನು



ವಿಭೀಷಣನ ಶರಣಾಗತಿ

ನೋಡಿಕೊಳ್ಳುತ್ತೇನೆ. ಅದು ನನ್ನ ವ್ರತ. ಆದ್ದರಿಂದ ಸಂದೇಹ ಬೇಡ. ಹೋಗಿ ಆ ವಿಭೀಷಣನನ್ನು ಕರೆದುಕೊಂಡು ಬಾ. ಬಂದವನು ವಿಭೀಷಣನೇ ಆಗಲಿ, ಸಾಕ್ಷಾತ್ ರಾವಣನೇ ಆಗಿರಲಿ ಅವನಿಗೂ ಅಭಯದಾನ ಉಂಟು." ಭಗವಂತನಲ್ಲಿ ಶರಣಾದ ಭಕ್ತರು ಹೇಗೆ ಅವನಲ್ಲಿ ಆಶ್ರಯ, ಭದ್ರತೆಗಳನ್ನು ಪಡೆಯುತ್ತಾರೆ ಎಂಬುದು ರಾಮಾಯಣದಲ್ಲಿ ಹೀಗೆ ಸುಂದರವಾಗಿ ಮೂಡಿಬಂದಿದೆ.

> ನಿನ್ನ ಎಲ್ಲ ಸಂಕಷ್ಟಗಳಲ್ಲೂ ಪೂರ್ಣ ಭರವಸೆಯಿಂದ ಭಗವಂತನಲ್ಲಿ ಶರಣಾಗು. ಅವನು ಸಮಾಧಾನ ನೀಡುವನು, ಬುದ್ಧಿಯನ್ನು ಬೆಳಗುವನು ಮತ್ತು ಬೋಧಿಸುವನು..
>
> — ಸೇಂಟ್ ಜಾನ್ ಆಫ್ ದ ಕ್ರಾಸ್
> *(St. John of the Cross)*

ವಿಭೀಷಣ ಶ್ರೇಷ್ಠ ಭಕ್ತ. ವೈಷ್ಣವರಿಗೆ ಅವನ ಹೆಸರು ಶ್ರೀರಾಮನ ಹೆಸರಿನಷ್ಟೇ ಪವಿತ್ರವಾದುದು. ಶರಣಾಗತಿ ಭಕ್ತಿಗೆ ಎತ್ತಿ ಹಿಡಿದ ಉದಾಹರಣೆ ಎಂದರೆ ವಿಭೀಷಣ. ಸ್ವಭಾವತಃ ಭಕ್ತನೇ ಆಗಿದ್ದ ವಿಭೀಷಣನಲ್ಲಿ ಶರಣಾಗತಿಯ ಸಮಸ್ತಗುಣಗಳೂ ಇವೆ. ಯಾಮುನಾಚಾರ್ಯರೆಂಬ ಮಹಾ ವೈಷ್ಣವರು ಬರೆದಿರುವ ಯತೀಂದ್ರ ಮತ ದೀಪಿಕಾ ಎನ್ನುವ ಗ್ರಂಥದಲ್ಲಿ ಶರಣಾಗತನಲ್ಲಿ ಇರಬೇಕಾದ ಆರು ಲಕ್ಷಣಗಳನ್ನು ಹೀಗೆ ವಿವರಿಸಿದ್ದಾರೆ :

**ಆನುಕೂಲಸ್ಯ ಸಂಕಲ್ಪಃ, ಪ್ರಾತಿಕೂಲಸ್ಯ ವರ್ಜನಂ |**
**ರಕ್ಷಿಷ್ಯತೀತಿ ವಿಶ್ವಾಸೋ, ಗೋಪ್ತೃತ್ವ ವರಣಂ ತಥಾ ||**
**ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ||**

೧) ಆನುಕೂಲಸ್ಯ ಸಂಕಲ್ಪಃ : "ನಾನು ಭಗವಂತನಿಗೆ ಯಾವುದು ಪ್ರಿಯವೋ ಆ ನಿಯಮವನ್ನು ಪಾಲಿಸುತ್ತೇನೆ" ಎಂಬ ಸಂಕಲ್ಪ. ಅಂದರೆ ಶಾಸ್ತ್ರ ಹಾಗೂ ಗುರುವಾಕ್ಯದಲ್ಲಿ ಅತೀವ ಶ್ರದ್ಧೆಯಿಟ್ಟು ಅವುಗಳನ್ನು ಪಾಲಿಸುವುದು. ಭಗವಂತನ ನಾಮಸ್ಮರಣೆಯನ್ನು ಸದಾ ಮಾಡುವುದು.

೨) ಪ್ರಾತಿಕೂಲಸ್ಯ ವರ್ಜನಂ : ಅಂದರೆ ಭಗವಂತ ಮೆಚ್ಚದುದನ್ನು ಬಿಡುವುದು. ಕೆಟ್ಟವರ ಸಹವಾಸವನ್ನು ಮಾಡಬಾರದು. ಕಾರಣ ಅವರು ಮನಸ್ಸನ್ನು ಭಗವಂತನಿಂದ ದೂರ ಕೊಂಡೊಯ್ಯಲು ಪ್ರಯತ್ನಿಸುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ : ಭಗವಂತನೆಡೆಗೆ ಹೋಗಲು ಅಡ್ಡಿ ಮಾಡಿದಲ್ಲಿ ನಿಮ್ಮ ತಂದೆ ತಾಯಿಗಳೂ ಶತ್ರುಗಳೆಂದೇ ತಿಳಿಯಿರಿ ಎಂದು. ಮೀರಾಬಾಯಿಗೆ ಅವಳ ಅತ್ತೆ, ನಾದಿನಿ, ಮೈದುನರೆಲ್ಲಾ ಆಕೆಯ ಭಗವದ್ ಭಕ್ತಿಯನ್ನು ಹೀಯಾಳಿಸಿದಾಗ ಆಕೆ ತುಲಸೀದಾಸರಿಗೆ ಒಂದು ಪತ್ರ ಬರೆಯುತ್ತಾಳೆ. ಅದಕ್ಕೆ ಅವರು ಉತ್ತರವಾಗಿ ಹೇಳುತ್ತಾರೆ: "ತಂಗಿ, ಮೀರಾ, ಯಾರು ಭಗವಂತನಿಗೆ ಪ್ರಿಯರಲ್ಲವೋ ಅವರು ಎಷ್ಟೇ ಆತ್ಮೀಯರಾಗಿದ್ದರೂ ಅವರೇ ತನ್ನ ಆಜನ್ಮ ವೈರಿಗಳೆಂಬುದಾಗಿ ತಿಳಿದು ಅವರನ್ನು ತ್ಯಜಿಸಬೇಕು." ವಿಭೀಷಣನು ಮಾಡಿದ್ದು ಇದೇ. ಆಂಜನೇಯನ ಸಂಗವನ್ನು ಬೆಳೆಸಿಕೊಂಡ ಹಾಗೂ ರಾವಣನನ್ನು ತ್ಯಜಿಸಿದ.

೩.) ರಕ್ಷಿಷ್ಯತೀತಿ ವಿಶ್ವಾಸಃ : ಪರಮಾತ್ಮನು ಶರಣಾಗತರಾದವರನ್ನು ಖಂಡಿತ ರಕ್ಷಿಸಿಯೇ ತೀರುತ್ತಾನೆಂಬ ವಿಶ್ವಾಸ. ದ್ರೌಪದಿ, ಪರೀಕ್ಷಿತ ಇವರ ಜೀವನಗಳೇ ಇದಕ್ಕೆ ಸಾಕ್ಷಿ. ಭಗವಂತ ರಕ್ಷಿಸುವನೆಂಬುದು ಎಷ್ಟು ಸತ್ಯವೋ ಅವನ ನಾಮಸ್ಮರಣೆಯೂ ಕಷ್ಟದಲ್ಲಿರುವವರನ್ನು ಕಾಪಾಡುವುದೆಂಬುದು ಅಷ್ಟೇ ಸತ್ಯ. ಕಾರಣ ನಾಮ ಬೇರೆ ಭಗವಂತ ಬೇರೆ ಅಲ್ಲ. ಭಗವನ್ನಾಮ ಸ್ಮರಣೆಯಲ್ಲಿ ಅತೀವ ಶ್ರದ್ಧೆ. ಇದನ್ನೇ ವಿಶ್ವಾಸ ಎನ್ನುವುದು.

೪.) ಗೋಪ್ತೃತ್ವವರಣಂ ತಥಾ : "ಪರಮಾತ್ಮನೇ ಗತಿ ಹಾಗೂ ಅವನು ನನ್ನನ್ನು ಸ್ವೀಕರಿಸಿದ್ದಾನೆ" ಎಂಬ ಅಚಲ ನಂಬಿಕೆ. ಕನಕದಾಸರು ಹಾಡಿರುವ "ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"ಎಂಬ ದೇವರನಾಮ ಈ ಭಾವವನ್ನು ಸ್ಪಷ್ಟಪಡಿಸುತ್ತದೆ. ಭಗವಂತ ಈ ಜಗತ್ತನ್ನು ಸೃಷ್ಟಿಸಿದ ಮೇಲೆ ಇದರ ರಕ್ಷಣೆಯ ಭಾರವನ್ನೂ ಖಂಡಿತ ಹೊರುತ್ತಾನೆ ಎನ್ನುವ ದೃಢ ವಿಶ್ವಾಸವಿರಬೇಕು. ಒಮ್ಮೆ ಛತ್ರಪತಿ ಶಿವಾಜಿ ತನ್ನ ಗುರು ಸಮರ್ಥ ರಾಮದಾಸರಿಗೆ ತಾನು ಕಟ್ಟಿದ್ದ ಕೋಟೆಯನ್ನೆಲ್ಲಾ ತೋರಿಸಿ ತನ್ನ ಶೌರ್ಯವನ್ನು ಹೇಳಿಕೊಳ್ಳುತ್ತಿದ್ದ. ಅವನು ಹೇಳಿದ: "ಗುರುಗಳೇ, ನಾನು ಕೋಟೆ ಕಟ್ಟಿಸುವ ನೆಪದಿಂದ ನಿತ್ಯವೂ ಐದಾರು ಸಾವಿರ ಜನಗಳಿಗೆ ಅನ್ನ ಆಹಾರ ಒದಗಿಸುತ್ತಿದ್ದೇನೆ. ಎಲ್ಲರೂ ಬದುಕಿಕೊಳ್ಳುತ್ತಾರೆ, ಪಾಪ!" ಸಮರ್ಥ ರಾಮದಾಸರು ತಮ್ಮ ಶಿಷ್ಯನಿಗೆ ಅಹಂಕಾರ ಬರುತ್ತಿದೆ, ಅವನನ್ನು ಎಚ್ಚರಿಸಬೇಕು ಎಂದು ಯೋಚಿಸಿ, ಪಕ್ಕದಲ್ಲಿ ನಿಂತಿದ್ದ ಒಬ್ಬ ಒಡ್ಡನನ್ನು ಕರೆದು, ಹತ್ತಿರದಲ್ಲಿದ್ದ ಒಂದು ಸಣ್ಣ ಬಂಡೆಯನ್ನು ಒಡೆಯಲು ಹೇಳಿದರು. ಒಡ್ಡ ಅದನ್ನು ಒಡೆದ. ಅದರ ಒಳಗಡೆ ಒಂದು ಸಣ್ಣ ಕಪ್ಪೆಯಿದ್ದು, ಅಲ್ಲಿ ಸ್ವಲ್ಪ ನೀರೂ ಇತ್ತು. ಅದನ್ನು ಕಂಡು ಆಶ್ಚರ್ಯಪಡುವವರಂತೆ ನಟಿಸಿ, ಶ್ರೀ ಸಮರ್ಥರು, "ಹೇ ಶಿವಾಜಿ! ಎಷ್ಟೊಂದು ವ್ಯವಸ್ಥೆ ಮಾಡಿದ್ದೀಯಪ್ಪಾ! ಸಾವಿರಾರು ಜನರಿಗೆ ಕೆಲಸ ಕೊಡುವ ವ್ಯವಸ್ಥೆಯಲ್ಲದೆ, ಈ ಕಲ್ಲಿನೊಳಗಿರುವ ಕಪ್ಪೆಗೂ ನಿತ್ಯ ನೀರು ಕೊಡುವ ವ್ಯವಸ್ಥೆ ಮಾಡಿದ್ದೀಯಲ್ಲಾ," ಎಂದರು. ಆಗ ಶಿವಾಜಿಯು ನಾಚಿ ತನ್ನ ತಪ್ಪು ಅರಿವು ಮಾಡಿಕೊಂಡು ಪರಮಾತ್ಮನೇ ರಕ್ಷಣೆ, ಗೋಪನೆ, ಸಂಗೋಪನೆ ಮಾಡುವವನು ಎನ್ನುವುದನ್ನು ಮನಗಂಡನು.

೫) ಆತ್ಮನಿಕ್ಷೇಪ : ಶರಣಾಗತಿಯಲ್ಲಿ ಐದನೆಯ ಹಂತ ಆತ್ಮನಿಕ್ಷೇಪ. ಅಂದರೆ ಮನೋವಾಕ್ಕಾಯವಾಗಿ ಸಂಪೂರ್ಣ ತನ್ನನ್ನು ಭಗವಂತನಿಗೆ ಸಮರ್ಪಿಸಿಕೊಳ್ಳುವುದು. ಅಂದರೆ ನಮ್ಮ ಜೀವನದಲ್ಲಿ ಏನು ನಡೆಯುತ್ತಿದ್ದರೂ ಎಲ್ಲವೂ ಭಗವಂತನ ಇಚ್ಛೆಯಿಂದ ಆಗುತ್ತಿದೆ ಎಂಬ ದೃಢವಿಶ್ವಾಸದಿಂದ ಅವನಲ್ಲಿ ಶರಣು ಹೋಗುವುದು. ನಮ್ಮ ಮನಸ್ಸಿನಲ್ಲಿ ಯಾವ ಕಾಮನೆಯನ್ನೂ ಇರಿಸಿಕೊಳ್ಳದೆ ಸಂಪೂರ್ಣವಾಗಿ ಪರಮಾತ್ಮನಿಗೆ ನಮ್ಮನ್ನು ಅರ್ಪಿಸಿಕೊಂಡು ಅವನಿಚ್ಛೆಗನುಗುಣವಾಗಿ ನಡೆಯುತ್ತೇನೆನ್ನುವುದೇ ಆತ್ಮನಿಕ್ಷೇಪ.

> ನೀವು ಧ್ಯಾನಕ್ಕೆ ಕುಳಿತುಕೊಂಡಾಗ, ಮೊಟ್ಟಮೊದಲಿಗೆ ನಿಮ್ಮ ಹೃದಯಾಂತರಾಳದಲ್ಲಿರುವ ಮತ್ತು ಸರ್ವವ್ಯಾಪಿಯಾದ ದಿವ್ಯಶಕ್ತಿಗೆ ನಿಮ್ಮನ್ನು ಸಂಪೂರ್ಣ ಅರ್ಪಿಸಿಕೊಳ್ಳಬೇಕು. ಹೀಗೆ ನಿಮ್ಮ ಇಚ್ಛೆಯು ಭಗವದಿಚ್ಛೆಯೊಂದಿಗೆ ಸಮಸ್ಪಂದಿಯಾದಾಗ ನಿಮ್ಮ ಮನಸ್ಸು ಪರಿಪೂರ್ಣ ಪಾವಿತ್ರ್ಯ ಮತ್ತು ಶಾಂತಿಯಲ್ಲಿ ನೆಲೆಸಿರುತ್ತದೆ. ಆಗ ನಿಮ್ಮ ಜೀವನ ಭಗವದಾನಂದವನ್ನು ಹೊರಸೂಸುತ್ತದೆ. — "ಪರಮಾರ್ಥ ಪ್ರಸಂಗ" ದಿಂದ

೬) ಕಾರ್ಪಣ್ಯ : ಶರಣಾಗತಿಯ ಕೊನೆಯ ಹಂತ ಕಾರ್ಪಣ್ಯ. ಅಂದರೆ ಭಗವಂತನ ಮುಂದೆ ದೀನನಾಗುವುದು. ಶ್ರೀ ಸಂತ ತುಲಸೀ ದಾಸರು, "ಹೇ ರಾಮ! ನಾನು ದೀನ, ನೀನು ದಯಾಳು. ನಾನು ಭಿಕಾರಿ, ನೀನು ದಾನಿ. ನಾನು ಪಾತಕಿ, ನೀನು ಪಾಪಹಾರಿ. ನಾನು ಅನಾಥ, ನೀನು ನಾಥ. ನೀನು ದೇವ, ನಾನು ಜೀವ. ನೀನು ಒಡೆಯ, ನಾನು ದಾಸ" ಎಂದು ಶ್ರೀರಾಮನನ್ನು ದೀನರಾಗಿ ಪ್ರಾರ್ಥಿಸುತ್ತಾರೆ.

ನಾವು ವಿಭೀಷಣನ ಶರಣಾಗತಿಯ ಪ್ರಸಂಗವನ್ನು ನೋಡಿದರೆ ಅವನಲ್ಲಿ ಈ ಆರು ಗುಣಗಳೂ ಸಮರ್ಪಕವಾಗಿ ಇರುವುದನ್ನು ಕಾಣಬಹುದು. ಅವನ ಬಗ್ಗೆ ಸರಿಯಾಗಿ ಅರಿಯದವರು ಅವನು ರಾಜಕೀಯದಲ್ಲಿ ರಾಜ್ಯದ ಆಸೆಗಾಗಿ ಪಕ್ಷಾಂತರ ಮಾಡಲು ದಾರಿ ತೋರಿಸಿದ ರಾಜಕೀಯ ಗುರು ಎನ್ನುತ್ತಾರೆ. ಆದರೆ ಅವನ ಶರಣಾಗತಿಯ ಭಾವವನ್ನು ಸರಿಯಾಗಿ ಓದಿ ಅರ್ಥಮಾಡಿಕೊಂಡರೆ, ಅವನು ಪದವಿಯ ಆಸೆಗಳನ್ನೆಲ್ಲಾ ದಾಟಿದ್ದನೆಂಬುದು ಸ್ಪಷ್ಟವಾಗುತ್ತದೆ. ವಿಭೀಷಣ ನಿಮಿತ್ತ ಮಾತ್ರ. ಯಾವ ಭಕ್ತನಾದರೂ ಸರಿ, ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳಬೇಕಾದರೆ, ಪೂರ್ಣ ಮನಸ್ಸಿನಿಂದ ಭಗವಂತನಲ್ಲಿ ಶರಣಾದರೆ, ಖಂಡಿತ ಭಗವಂತನು ಅವನನ್ನು ಉದ್ಧಾರ ಮಾಡುವ ಹೊಣೆ ಹೊರುತ್ತಾನೆ. ನ ಮೇ ಭಕ್ತಃ ಪ್ರಣಶ್ಯತಿ ಎನ್ನುವುದಕ್ಕೆ ವಿಭೀಷಣನ ಜೀವನ ಒಂದು ದೊಡ್ಡ ನಿದರ್ಶನ.

❄

## ಪೂರ್ಣ ಶರಣಾಗತಿ !

ಶ್ರೀಕೃಷ್ಣನಿಗೆ ಜ್ವರ ಬಂದುಬಿಟ್ಟಿದೆ. ಯಾವುದೇ ಔಷಧಿಯಿಂದಲೂ ಗುಣವಾಗುತ್ತಿಲ್ಲ. ತಾಯಿ ಯಶೋದೆ ತುಂಬ ಕಾತರದಲ್ಲಿದ್ದಾಳೆ. ಅವಳು ಕೃಷ್ಣನನ್ನೇ ಕೇಳಿದಳು, "ನಿನ್ನ ಕಾಯಿಲೆಗೆ ಔಷಧಿ ಯಾವುದು ಎಂದು ನೀನೇ ಹೇಳು" ಎಂದು.

ಕೃಷ್ಣನು ಹೇಳಿದ : "ಅಮ್ಮ, ಯಾರು ನನ್ನನ್ನು ತುಂಬ ಪ್ರೀತಿಸುತ್ತಾರೊ ಅವರ ಪಾದಧೂಳಿಯನ್ನು ತಂದು ನನ್ನ ಹಣೆಗೆ ಹಚ್ಚಿದರೆ ಕಾಯಿಲೆ ಗುಣವಾಗುತ್ತದೆ."

ಯಶೋದೆಗೆ ಈಗ ಸಮಾಧಾನವಾಯಿತು. ಶ್ರೀಕೃಷ್ಣನನ್ನು ಪ್ರೀತಿಸುವ ಅನೇಕ ಗೋಪಗೋಪಿಯರಿದ್ದಾರೆ, ಸುಲಭವಾಗಿ ಅವರ ಪಾದಧೂಳಿಯನ್ನು ತಂದುಬಿಡಬಹುದು ಎಂದು ಭಾವಿಸಿ ಉತ್ಸಾಹದಿಂದ ಔಷಧಿಯನ್ನು ತರಲು ಹೊರಟಳು.

ಅವಳು ಒಬ್ಬ ಗೋಪಿಯ ಮನೆಗೆ ಹೋಗಿ ಶ್ರೀಕೃಷ್ಣನಿಗಾಗಿ ಪಾದಧೂಳಿಯನ್ನು ಕೊಡಬೇಕೆಂದು ಕೇಳಿದಳು. ಶ್ರೀಕೃಷ್ಣನ ಹೆಸರನ್ನು ಕೇಳಿಯೇ ಪುಳಕಿತಳಾಗಿದ್ದ ಆ ಗೋಪಿ ಪಾದಧೂಳಿಯನ್ನು ಕೃಷ್ಣನ ಹಣೆಯ ಮೇಲೆ ಹಚ್ಚಬೇಕೆಂಬ ವಿಷಯವನ್ನು ತಿಳಿದಾಗ ಹೌಹಾರಿ ಹೇಳಿದಳು : "ಅಮ್ಮಾ ಯಶೋದೆ, ನಿನಗೆ ಗೊತ್ತು ನಾನು ಕೃಷ್ಣನನ್ನು ಎಷ್ಟೊಂದು ಪ್ರೀತಿಸುತ್ತೇನೆ ಎಂದು. ಅವನಿಗಾಗಿ ನಾನು ಏನು ಮಾಡಲೂ ಸಿದ್ಧ, ನನ್ನ ಜೀವನವನ್ನೇ ಕೊಡಬಲ್ಲೆ. ಆದರೆ ಇದು ಮಾತ್ರ ಸಾಧ್ಯವಿಲ್ಲ. ಏಕೆಂದರೆ ನಿನಗೆ ತಿಳಿದಿರುವಂತೆ, ಭಕ್ತನ ಪಾದಧೂಳಿ ಭಗವಂತನ ಲಲಾಟವನ್ನು ಸ್ಪರ್ಶಿಸಿದರೆ ಭಕ್ತನು ರೌರವ ನರಕಕ್ಕೆ ಹೋಗುತ್ತಾನೆಂದು ಶಾಸ್ತ್ರ ಹೇಳುತ್ತದೆ."

ಯಶೋದೆ ನಿರಾಶೆಯಿಂದ ಅಲ್ಲಿಂದ ಹೊರಟಳು. ಅವಳು ಹೀಗೆ ಅನೇಕ ಗೋಪಗೋಪಿಯರನ್ನು ಭೇಟಿ ಮಾಡಿ ಪಾದಧೂಳಿಯನ್ನು ಕೇಳಿದಳು. ಎಲ್ಲರಿಂದಲೂ ಒಂದೇ ಉತ್ತರ.

ಕೊನೆಗೆ ಅವಳು ರಾಧೆಯ ಹತ್ತಿರ ಹೋಗುತ್ತಾಳೆ. ರಾಧೆ ವಿಷಯವನ್ನು ತಿಳಿದು ಹೇಳುತ್ತಾಳೆ : "ಅಮ್ಮ ಯಶೋದೆ, ನನ್ನಲ್ಲಿರುವುದೆಲ್ಲ ಕೃಷ್ಣನಿಗೆ ಸೇರಿದುದು. ನಿನಗೆ ಏನು ಬೇಕೊ ಅದನ್ನು ತೆಗೆದುಕೊಂಡು ಹೋಗು. ಪಾದಧೂಳಿ ಬೇಕೆ, ತಲೆಯ ಕಿರೀಟ ಬೇಕೆ, ಯಾವುದು ಬೇಕು? ಎಲ್ಲವೂ ಅವನದೇ!"

ಯಶೋದೆ ಆಶ್ಚರ್ಯದಿಂದ ಹೇಳಿದಳು: "ರಾಧೆ, ಯಾರು ಭಗವಂತನಿಗೆ ಪಾದಧೂಳಿಯನ್ನು ನೀಡುತ್ತಾರೊ ಅವರಿಗೆ ನರಕಪ್ರಾಪ್ತಿ. ಇದು ನಿನಗೆ ತಿಳಿಯದೆ ?"

ರಾಧೆ ಮುಗುಳ್ನಕ್ಕು ನುಡಿದಳು : "ನನಗೆ ಗೊತ್ತು. ಅದಕ್ಕಾಗಿಯೇ ಹೇಳುತ್ತಿದ್ದೇನೆ. ಕೃಷ್ಣನಿಗಾಗಿ ನಾನು ನರಕಕ್ಕೆ ಹೋಗಬೇಕಾದರೆ ಅದಕ್ಕಿಂತ ದೊಡ್ಡ ಭಾಗ್ಯ ಬೇರೊಂದುಂಟೆ? ನಾನು ಸಂಪೂರ್ಣ ಅವನಿಗೇ ಸೇರಿದವಳು. ನಾನು ಎಲ್ಲಿದ್ದರೂ ಅವನೊಂದಿಗೇ ಇರುತ್ತೇನೆ. ಅದೇ ನನಗೆ ಸುಖ. ಅದು ನರಕವಾದರೇನು, ಸ್ವರ್ಗವಾದರೇನು? ತಗೊ, ನನ್ನ ಪಾದಧೂಳಿಯನ್ನು ತೆಗೆದುಕೊಂಡು ಹೋಗು."

ಯಶೋದೆ ಮಂತ್ರಮುಗ್ಧಳಾದಳು. ಅವಳ ಬಾಯಿಂದ ಮಾತೇ ಹೊರಡದಾಯಿತು. ಮೌನವಾಗಿ ರಾಧೆಯ ಪಾದಧೂಳಿಯನ್ನು ತೆಗೆದುಕೊಂಡು ಮನೆಗೆ ಹಿಂದಿರುಗಿದಳು. ಮನೆಗೆ ಬಂದು ನೋಡುತ್ತಾಳೆ, ಕೃಷ್ಣನು ಹಾಸಿಗೆಯ ಮೇಲೆ ಇಲ್ಲವೇ ಇಲ್ಲ, ಅವನು ಎಂದಿನಂತೆ ಆಟದಲ್ಲಿ ನಿರತನಾಗಿದ್ದ. ಇದೆಲ್ಲ ಅವನ ಲೀಲೆ ಎಂದು ಆಕೆಗೆ ತಿಳಿಯಿತು.

✳